# ಮನ್ ಕಿ ಬಾತ್

ಸಂಪುಟ 7



# MANN KI BAAT
## VOL.7

**Authors**
Sarda Mohan and Tanushree Banerji

**Illustrations and Cover Art**
Dilip Kadam

**Assistant Artist**
Ravindra Mokate

**Production**
Amar Chitra Katha

**Colourists**
Prakash Sivan and Prajeesh V. P.

**Layout Artist**
Akshay Khadilkar

**Published by**
Amar Chitra Katha Pvt. Ltd

KANNADA

ISBN – 978-81-967344-1-1

Amar Chitra Katha Pvt. Ltd, November 2023

© Ministry of Culture, Govt of India, November 2023
All rights reserved. This book is sold subject to the condition that the publication may not be reproduced, stored in a retrieval system (including but not limited to computers, disks, external drives, electronic or digital devices, e-readers, websites), or transmitted in any form or by any means (including but not limited to cyclostyling, photocopying, docutech or other reprographic reproductions, mechanical, recording, electronic, digital versions) without the prior written permission of the publisher, nor be otherwise circulated in any form of binding or cover other than that in which it is published and without a similar condition being imposed on the subsequent purchaser.

You can now get ACK stories as part of your classroom with **ACK Learn**, a unique learning platform that brings these stories to your school with a range of workshops. Find out more at **www.acklearn.com** or write to us at **acklearn@ack-media.com**.




ಪ್ರೀತಿಯ ಮಕ್ಕಳೇ,

'ಆರೋಗ್ಯವೇ ಭಾಗ್ಯ' ಎಂಬ ಹೇಳಿಕೆಯನ್ನು ನೀವೆಲ್ಲರೂ ಕೇಳಿರಬಹುದು. ಕೋವಿಡ್ ಮಹಾಮಾರಿಯ ಪಾರಿಣಾಮಗಳಿಂದ ಚೇತರಿಸಿಕೊಳ್ಳುತ್ತಿರುವ ನಮ್ಮೆಲ್ಲರಿಗೂ ಈ ಮಾತು ಎಷ್ಟು ಸತ್ಯವಾದದ್ದು ಎಂಬುದು ಈಗ ಅರಿವಾಗುತ್ತಿದೆ. ಉತ್ತಮ ಆರೋಗ್ಯ ಪಡೆದುಕೊಳ್ಳಬೇಕಾದರೆ ಅದಕ್ಕೆ ಬೆಂಬಲ ಬಹಳ ಅಗತ್ಯ. ಆ ಬೆಂಬಲ ನಿಮಗೆ ನಿಮ್ಮ ಕುಟುಂಬದಿಂದ ಸಿಗಬಹುದು, ನಿಮ್ಮ ನೆರೆಹೊರೆಯವರಿಂದ ಸಿಗಬಹುದು, ವೈದ್ಯರು ನಿಮಗೆ ಬೆಂಬಲ ನೀಡಬಹದು. ಅಷ್ಟೇಕೆ, ಆ ಬೆಂಬಲ ನಿಮಗೆ ಅಪರಿಚಿತರಿಂದ ಕೂಡ ದೊರಕಬಹುದು. ಅಂತಹ ಬೆಂಬಲ ನಿಮ್ಮ ಬದುಕಿನ ಗುಣಮಟ್ಟವನ್ನೇ ಬದಲಿಸಬಹುದು.

ಸಂಜನಾ ಗೋಯಲ್ ಮತ್ತು ಅವಳ ಸಹೋದರರು ಚಿಕ್ಕವರಿದ್ದಾಗ ಅವರು ಮಸ್ಕ್ಯುಲರ್ ಡಿಸ್ಟ್ರೋಫಿ (ಮಾಂಸಖಂಡಗಳು ನಶಿಸಿಹೋಗುವ ವಂಶವಾಹಿ ಕಾಯಿಲೆ) ಕಾಯಿಲೆಯಿಂದ ನರಳುತ್ತಿದ್ದರು. ತಮ್ಮ ಮಕ್ಕಳ ಅರೋಗ್ಯದ ಸ್ಥಿತಿಯ ಬಗ್ಗೆ ಗೋಳಾಡುವುದರ ಬದಲು ಅವರ ತಂದೆ ತಾಯಿಗಳು ತಮ್ಮ ಮಕ್ಕಳ ಬೆಂಬಲಕ್ಕೆ ನಿಂತರು. ಅವರಲ್ಲಿ ಸಕಾರಾತ್ಮಕ ಧೋರಣೆಯನ್ನು ಬೆಳೆಸಿದರು. ಅದರ ಪರಿಣಾಮವಾಗಿ ಸಂಜನಾ ಮಾನವ್ ಮಂದಿರ್ ಎಂಬ ಆಸ್ಪತ್ರೆಯನ್ನು ಸ್ಥಾಪಿಸಿದರು. ಈ ಆಸ್ಪತ್ರೆ ಮಸ್ಕ್ಯುಲರ್ ಡಿಸ್ಟ್ರೋಫಿ ಕಾಯಿಲೆಗೆ ಚಿಕಿತ್ಸೆ ನೀಡುವ ಏಷ್ಯಾ ಖಂಡದಲ್ಲೇ ಅತಿ ದೊಡ್ಡ ಆಸ್ಪತ್ರೆಯಾಗಿದೆ.

ನಿಕ್ಷಯ್ ಮಿತ್ರಾಸ್ ಕ್ಷಯ ರೋಗದಿಂದ ಬಳಲುತ್ತಿರುವ ರೋಗಿಗಳ ಬೆಂಬಲಕ್ಕೆ ನಿಂತಿರುವ ಉತ್ತರಾಖಂಡ ರಾಜ್ಯದಲ್ಲಿನ ಸಾಮಾನ್ಯ ಜನರ ಗುಂಪಾಗಿದೆ. ಈ ಗುಂಪಿನಲ್ಲಿ 8 ವರ್ಷದ ನಳಿನಿ ಎಂಬ ಹೆಣ್ಣು ಮಗಳಿಂದ ಹಿಡಿದು ಹಳ್ಳಿಯ ಪ್ರಧಾನನವರೆಗೆ ಸೇರಿಕೊಂಡು ಕ್ಷಯ ರೋಗ ಪೀಡಿತರ ಆರೋಗ್ಯ ಸುಧಾರಿಸಲು ಅವರ ಬೆಂಬಲಕ್ಕೆ ನಿಂತಿದ್ದಾರೆ. ಪರಿಣಾಮ: ರೋಗಿಗಳ ಆರೋಗ್ಯದಲ್ಲಿ, ಬದುಕಿನಲ್ಲಿ ಸಾಕಷ್ಟು ಸುಧಾರಣೆಯಾಗಿದೆ.




ಇನ್ನು ಕೆಲವರು ಉಚಿತ ಆರೋಗ್ಯ ಶಿಬಿರಗಳನ್ನು ನಡೆಸುವುದರ ಮೂಲಕ ಜನರಿಗೆ ಉಚಿತ ಆರೋಗ್ಯ ಸೇವೆಗಳನ್ನು ನೀಡುತ್ತಿದ್ದಾರೆ.

ಇವೆರೆಲ್ಲರಿಗೂ ಸಾಮಾನ್ಯವೆನಿಸುವ ಅಂಶವೆಂದರೆ ಇವರು ಆರೋಗ್ಯದ ಸವಾಲುಗಳನ್ನು ಎದುರಿಸಿದರು, ಜೊತೆಗೆ ಅದನ್ನು ಎದುರಿಸಿ ಯಶಸ್ವಿಯಾಗಿ ರೋಗವನ್ನು ಮೆಟ್ಟಿ ನಿಲ್ಲಲು ಅವರಿಗೆ ಬೆಂಬಲ ದೊರಕಿದ್ದು. ಅದು ಅವರು ಪಡೆದುಕೊಂಡ ಕೊಡುಗೆಯೇ ಸರಿ. ಮತ್ತು ಅವರ ಹಾಗೆ ಅನಾರೋಗ್ಯದ ಸಮಸ್ಯೆಗಳಿಂದ ಬಳಲುತ್ತಿರುವ ಜನರ ಸಹಾಯಕ್ಕೆ ನಿಂತದ್ದು.

ಇತರರಿಂದ ನಿಮ್ಮ ಬದುಕಿನಲ್ಲಿ ಸಹಾಯ ಪಡೆದುಕೊಂಡ ನೀವೂ ಕೂಡ ಮತ್ತೊಬ್ಬರಿಗೆ ಸಹಾಯ ಮಾಡುವ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕೆಂದು ನಾನು ಆಶಿಸುತ್ತೇನೆ.


# ಪರಿವಿಡಿ



| | | |
|---|---|---|
| 1 | ಮಾನವ್ ಮಂದಿರ್ | 3 |
| 2 | ದಿಕರ್ ಸಿಂಗ್ ಮೇವಾರಿ | 6 |
| 3 | ಪೂನಂ ನೌತಿಯಾಲ್ | 9 |
| 4 | ಸಂಕಲ್ಪ 95 | 12 |
| 5 | ಸರಪಂಚ ಬಲ್ಬೀರ್ ಕೌರ್ | 15 |
| 6 | ಅಜಿತ್ ಮೋಹನ್ ಚೌಧರಿ | 18 |
| 7 | ಮಿಲೆಟ್ಸ್ ಕೆಫೆ | 21 |
| 8 | ಸೈದುಲ್ ಲಸ್ಕರ್ | 23 |
| 9 | ನಳಿನಿ ಸಿಂಗ್ | 26 |
| 10 | ಲಕ್ಷ್ಮಿಕುಟ್ಟಿ | 28 |
| 11 | ರಾಮ ಸುಬ್ಬಾ ರೆಡ್ಡಿ | 31 |





* ಮಾಂಸಖಂಡಗಳು ನಶಿಸಿಹೋಗುವ ವಂಶವಾಹಿ ಕಾಯಿಲೆ

^ಹಿಮಾಚಲ ಪ್ರದೇಶದಲ್ಲಿ


ಉದ್ಯಮಿಯಾಗಿರುವುದರ ಜೊತೆಗೆ ಎಮ್‌ಡಿ ಕಾಯಿಲೆ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ಸಂಜನಾ ಅಂದುಕೊಂಡರು.
ಎಮ್‌ಡಿ ಕಾಯಿಲೆಗೆ ಯಾವುದೇ ಚಿಕಿತ್ಸೆ ಇಲ್ಲ, ಆದರೆ ನಮ್ಮ ಕುಟುಂಬದಿಂದ ನಮಗೆ ಸಿಕ್ಕ ಬೆಂಬಲವು ನಮಗೆ ಅಪಾರವಾಗಿ ಸಹಾಯ ಮಾಡಿದೆ.
ಹೌದು, ವಿಪುಲ್ ಎಮ್‌ಡಿ ಕಾಯಿಲೆ ಎದುರಿಸುತ್ತಿರುವರಿಗೆ ಮತ್ತು ಅವರ ಕುಟುಂಬಗಳಿಗೆ ನಾವು ಸಹ ಅದೇ ರೀತಿಯ ಬೆಂಬಲ ನೀಡಬೇಕು ಎಂದು ನನಗೆ ಬಹಳವಾಗಿ ಅನಿಸುತ್ತಿದೆ.
ಸಮಾನ ಮನಸ್ಕರೊಂದಿಗೆ ಸೇರಿ, ಸಂಜನಾ ಇಂಡಿಯನ್ ಅಸೋಸಿಯೇಷನ್ ಆಫ್ ಮಸ್ಕ್ಯು ಲರ್ ಡಿಸ್ಟ್ರೋಫಿ (ಐಎಎಮ್‌ಡಿ) ಎಂಬ ಸರ್ಕಾರೇತರ ಸಂಸ್ಥೆ (ಎನ್‌ಜಿಒ) ಸ್ಥಾಪಿಸಿದರು.
ಐಎಎಮ್‌ಡಿಯ ತಂಡವು ಮೊದಲು ಹಿಮಾಚಲಪ್ರದೇಶದಲ್ಲಿ ಮತ್ತು ನಂತರ ಭಾರತದಾದ್ಯಂತ ಜಾಗೃತಿ ಶಿಬಿರಗಳನ್ನು ನಡೆಸಲು ಪ್ರಾರಂಭಿಸಿತು.
2004 ರಲ್ಲಿ, ಸಂಜನಾ ವಿಕಲಾಂಗ ವ್ಯಕ್ತಿಗಳ ಕಲ್ಯಾಣಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ಗೆದ್ದರು.
ಅಂದಿನ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರವರು ಸಂಜನಾರವರನ್ನು ಅಭಿನಂದಿಸಿ, ಆಕೆಯ ಅದಮ್ಯ ಚೇತನವನ್ನು ಶ್ಲಾಘಿಸಿದರು.
ನಂತರ -
ನಾವು ಫಿಸಿಯೋಥೆರಪಿ, ಹೈಡ್ರೋಥೆರಪಿ ಮತ್ತು ಕೌನ್ಸೆಲಿಂಗ್‌ನಂತಹ ಸೇವೆಗಳನ್ನು ನೀಡಿದರೆ ಹೇಗೆ?
ಇದಕ್ಕಾಗಿ ಜಾಗ ನೀಡುವಂತೆ ನಾವು ಸರ್ಕಾರಕ್ಕೆ ಮನವಿ ಮಾಡೋಣ.
2010 ರಲ್ಲಿ, ಸರ್ಕಾರವು ಅವರಿಗೆ ಪುನರ್ವಸತಿ ಘಟಕದ ನಿರ್ಮಾಣಕ್ಕಾಗಿ ಭೂಮಿಯನ್ನು ಮಂಜೂರು ಮಾಡಿತು...
...ಮತ್ತು ಆ ಸ್ಥಳದಲ್ಲಿ ಸಂಶೋಧನೆ, ರೋಗನಿರ್ಣಯ ಮತ್ತು ಪುನರ್ವಸತಿ ಸೌಲಭ್ಯಗಳುಳ್ಳ 70 ಹಾಸಿಗೆಗಳ ಆಸ್ಪತ್ರೆ, ಮಾನವ್ ಮಂದಿರ್ ನಿಧಾನವಾಗಿ ನಿರ್ಮಾಣಗೊಂಡಿತು.
ನಾನು ಈ ಸ್ಥಳವನ್ನು ಜ್ಞಾನ, ಮಾನಸಿಕ ಬೆಂಬಲ ಹಾಗೂ ಎಲ್ಲ ರೀತಿಯ ಚಿಕಿತ್ಸೆಗಳನ್ನು ನೀಡುವ ಸ್ಥಳವಾಗಿ ನೋಡುತ್ತೇನೆ!
ಆಸ್ಪತ್ರೆಯು ಎಮ್‌ಡಿ ಕಾಯಿಲೆಗೆ ಒಳಗಾಗಿದ್ದ ಹಲವಾರು ಜನರಿಗೆ ಉದ್ಯೋಗವನ್ನೂ ನೀಡಿದೆ.


ಅತ್ಯುತ್ತಮ ಪ್ರತಿಕ್ರಿಯೆಯಿಂದ ಉತ್ತೇಜನಕ್ಕೊಳಗಾದ ಮಾನವ್ ಮಂದಿರ್ ಚಿಕಿತ್ಸಕ ಸೇವೆಗಳನ್ನು ಇನ್ನೂ ಹೆಚ್ಚಿಸುತ್ತಲೇ ಬಂದಿತು...
...ಅಂದರೆ, ಜಲಚಿಕಿತ್ಸೆ...
...ಫಿಸಿಯೋಥೆರಪಿ...
...ಮತ್ತು ಯೋಗ, ಇತ್ಯಾದಿಗಳು.
ಇದರ ಜೊತೆಗೆ ಮಾನವ್ ಮಂದಿರ್ ಚಟುವಟಿಕಾ ಅವಧಿಗಳನ್ನು ಹೊಂದಿದ್ದು, ಅದರಲ್ಲಿ ಸದಸ್ಯರು ಹಾಡುತ್ತಾರೆ, ನೃತ್ಯ ಮಾಡುತ್ತಾರೆ, ಆಟಗಳನ್ನು ಆಡುತ್ತಾರೆ...
ಮತ್ತು ಪರ್ವತದ ಆಹ್ಲಾದಕರ ವಾತಾವರಣದಲ್ಲಿ ಪಿಕ್ನಿಕ್‌ಗಳನ್ನು ಸಹ ಆಯೋಜಿಸುತ್ತದೆ.
ತನ್ನ ನಿರಂತರ ಪ್ರಯತ್ನದೊಂದಿಗೆ, ಸಂಜನಾ ಮತ್ತು ಅವರ ತಂಡವು ಸಾಮಾಜಿಕ ನಿಷೇಧಗಳನ್ನು ಮೆಟ್ಟಿ ನಿಂತು MD ಕಾಯಿಲೆ ಹೊಂದಿರುವವರಿಗೆ ಹೊಸ ಜೀವನವನ್ನು ನೀಡಿದ್ದಾರೆ.


# ದಿಕರ್ ಸಿಂಗ್ ಮೇವಾರಿ





*ಸಾಂಕ್ರಾಮಿಕ ಆದರೆ ಗುಣಪಡಿಸಬಹುದಾದ ರೋಗ


^ಉತ್ತರಾಖಂಡದಲ್ಲಿ

**ಮುಖ್ಯಸ್ಥ



ಸೆಪ್ಟೆಂಬರ್ 2022 ರಲ್ಲಿ ಕೇಂದ್ರ ಸರ್ಕಾರವು ಟಿಬಿ ಕಾಯಿಲೆಯನ್ನು ನಿರ್ಮೂಲನೆ ಮಾಡಲು ನಿಕ್ಷಯ್ ಮಿತ್ರ ಯೋಜನೆಯನ್ನು ಘೋಷಿಸಿತು.
ಭಾರತದಲ್ಲಿ 25 ಲಕ್ಷ ಟಿಬಿ ರೋಗಿಗಳಿದ್ದು ಇದು ವಿಶ್ವದಲ್ಲೇ ಅತಿ ಹೆಚ್ಚು! 2025 ರ ವೇಳೆಗೆ ಈ ರೋಗವನ್ನು ತೊಡೆದುಹಾಕುವ ನಮ್ಮ ಧ್ಯೇಯದಲ್ಲಿ ನಾವು ಕೈಜೋಡಿಸಬೇಕಾಗಿದೆ.
ಹಿಂದಿ ಭಾಷೆಯಲ್ಲಿ 'ನಿ' ಎಂದರೆ 'ಅಂತ್ಯ', 'ಕ್ಷಯ್' ಎಂದರೆ ಟಿಬಿಯ ಹೆಸರು, ಮತ್ತು 'ಮಿತ್ರ' ಎಂದರೆ 'ಸ್ನೇಹಿತ' ಎಂದರ್ಥ.
ನಿಕ್ಷಯ್ ಮಿತ್ರ ಯೋಜನೆಯಡಿಯಲ್ಲಿ, ಭಾರತೀಯರು ವೈದ್ಯಕೀಯ ಆರೈಕೆಯನ್ನು ಪಡೆಯಲು ಸಾಧ್ಯವಾಗದ ಟಿಬಿ ರೋಗಿಗಳನ್ನು 'ದತ್ತು ತೆಗೆದುಕೊಳ್ಳಲು' ಸ್ವಯಂಸೇವಕರಾಗಬಹುದು ಮತ್ತು ಅವರ ಪೌಷ್ಟಿಕಾಂಶದ ಅವಶ್ಯಕತೆಗಳು ಮತ್ತು ಚಿಕಿತ್ಸೆಯನ್ನು ಪ್ರಾಯೋಜಿಸಬಹುದು.
ದಿಕರ್ ವೈದ್ಯರೊಬ್ಬರಿಂದ ನಿಕ್ಷಯ್ ಮಿತ್ರ ಬಗ್ಗೆ ತಿಳಿದುಕೊಂಡರು, ಅವರು ತಮ್ಮ ಪ್ರದೇಶದಲ್ಲಿದ್ದ ಆರು ಟಿಬಿ ರೋಗಿಗಳನ್ನು ದತ್ತು ಪಡೆಯುವುದರಿಂದ ಹೆಚ್ಚಿನ ಪ್ರಯೋಜನ ಪಡೆಯಬಹುದು ಎಂದು ಹೇಳಿದರು.
ಟಿಬಿ ರೋಗಿಗಳು ಸಹ ಕಾಯಿಲೆಗೆ ಸಂಬಂಧಿಸಿದ ಬಹಳಷ್ಟು ಕಳಂಕವನ್ನು ಎದುರಿಸಬೇಕಾಗುತ್ತದೆ. ನೀವು ಸಹಾಯ ಮಾಡಬಹುದು ಎಂದು ನೀವು ಭಾವಿಸುತ್ತೀರಾ?
ಖಂಡಿತ, ನಾನು ಸಹಾಯ ಮಾಡಲು ನನ್ನ ಕೈಲಾದಷ್ಟು ಮಾಡುತ್ತೇನೆ!
ಜನರ ಸೇವೆ ಮಾಡಲು ಸದಾ ಸಿದ್ಧರಿದ್ದ ಅವರು ಎಲ್ಲಾ ಆರು ರೋಗಿಗಳನ್ನು ದತ್ತು ಪಡೆದರು.
ನಿಮ್ಮ ಬೆಂಬಲಕ್ಕಾಗಿ ನಾವು ತುಂಬಾ ಕೃತಜ್ಞರಾಗಿರುತ್ತೇವೆ, ಪ್ರಧಾನರೇ!
ನಿಮಗೆ ಸೇವೆ ಸಲ್ಲಿಸಲು ನನಗೆ ಸಂತೋಷವಾಗುತ್ತಿದೆ.


ಪ್ರತಿ ತಿಂಗಳು, ದಿಕರ್ ರೋಗಿಗಳನ್ನು ಭೇಟಿ ಮಾಡುತ್ತಾರೆ ಮತ್ತು ಅವರಿಗೆ ಪ್ರೊಟೀನ್ ಭರಿತ ಸರಬರಾಜುಗಳಾದ ಬೇಳೆ, ಅಕ್ಕಿ, ಗೋಧಿಹಿಟ್ಟು, ಮೊಟ್ಟೆ ಮತ್ತು ಎಣ್ಣೆಯನ್ನು ಒದಗಿಸುತ್ತಾರೆ.
ಪ್ರತಿ ತಿಂಗಳು ಸರ್ಕಾರದಿಂದ ಪಡೆಯುವ ಮೊತ್ತದ ಜೊತೆಗೆ ಅವರು ತಮ್ಮ ವೇನನದ ಹೆಚ್ಚಿನ ಭಾಗವನ್ನು ಇದಕ್ಕಾಗಿ ಬಳಸುತ್ತಾರೆ.
ಪ್ರಾಯೋಜಕತ್ವ, ಉತ್ತಮ ಪೋಷಣೆ ಮತ್ತು ನಿರಂತರ ಚಿಕಿತ್ಸೆಯೊಂದಿಗೆ, ಆರು ರೋಗಿಗಳಲ್ಲಿ ನಾಲ್ವರು ಬಹುತೇಕ ಗುಣಮುಖರಾಗಿದ್ದಾರೆ...
ನಿಯಮಿತ ಚಿಕಿತ್ಸೆ ಮತ್ತು ಆರೈಕೆಯಿಂದಾಗಿ ನಾನು ತುಂಬಾ ಸುಧಾರಿಸಿದ್ದೇನೆ.
...ಮತ್ತು ಇನ್ನಿಬ್ಬರು ಚೇತರಿಕೆಯ ಹಾದಿಯಲ್ಲಿದ್ದಾರೆ.
ದಿಕರ್ ಅವರ ಪ್ರಾಮಾಣಿಕ ಪ್ರಯತ್ನವನ್ನು ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಶ್ಲಾಘಿಸಿದ್ದಾರೆ.
ಮೇವಾರಿ ಯವರೇ, ನೀವು ಅತ್ಯುತ್ತಮವಾದ ಕೆಲಸ ಮಾಡುತ್ತಿದ್ದೀರಿ! ನಮ್ಮಿಂದ ಯಾವುದೇ ಸಹಾಯವಾಗುವುದಿದ್ದರೆ ದಯವಿಟ್ಟು ನಮಗೆ ತಿಳಿಸಿ.
ಧನ್ಯವಾದಗಳು, ಸರ್!
ಇವರನ್ನು ಭಾರತದ ಪ್ರಧಾನ ಮಂತ್ರಿಯವರೂ ಶ್ಲಾಘಿಸಿದ್ದಾರೆ.
ಎಲ್ಲ ಗ್ರಾಮಸ್ಥರ ನಿರಂತರ ಪ್ರೀತಿ ಮತ್ತು ಬೆಂಬಲಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ ಎಂದು ದಿಕರ್ ಹೇಳುತ್ತಾರೆ.
ಗ್ರಾಮಸ್ಥರು ನನ್ನ ಮೇಲೆ ನಂಬಿಕೆ ಇಟ್ಟಿದ್ದಾರೆ, ಅವರ ನಿರೀಕ್ಷೆಗೆ ತಕ್ಕಂತೆ ನಾನು ನ್ಯಾಯ ಒದಗಿಸುತ್ತೇನೆ.
ತನ್ನ ಕಾರ್ಯಗಳ ಮೂಲಕ, ದಿಕರ್ ಕೇವಲ ನಿಕ್ಷಯ್ ಮಿತ್ರನಲ್ಲ, ಆದರೆ ನಿಜವಾದ ಅರ್ಥದಲ್ಲಿ ಮಿತ್ರ ಎಂದು ದೇಶಕ್ಕೆ ಸಾಬೀತುಪಡಿಸಿ ತೋರಿಸಿದ್ದಾರೆ.

# ಪೂನಮ್ ನೌತಿಯಾಲ್




ನಾಯರ್ ಸರ್ ಅವರ ತರಗತಿಯ ವಿದ್ಯಾರ್ಥಿಗಳು ತಮ್ಮ ಇತ್ತೀಚಿನ ರಜಾದಿನಗಳ ಬಗ್ಗೆ ಚರ್ಚಿಸುತ್ತಿದ್ದರು.
ನಮ್ಮ ಕುಟುಂಬದವರು ಗೋಲ್ಡನ್ ಟೆಂಪಲ್ ನೋಡಲು ಅಮೃತಸರಕ್ಕೆ ಪ್ರವಾಸ ಕೈಗೊಂಡಿದ್ದೆವು.
ನಾನು ಉತ್ತರಾಖಂಡಕ್ಕೆ ಚಾರಣಕ್ಕೆ ಹೋಗಿದ್ದೆ.
ಅದ್ಭುತ! ಅದು ತುಂಬಾ ಕಠಿಣಕರವಾಗಿತ್ತೇ?
ಹಾ, ಹೌದು. ಅಲ್ಲಿನ ಭೂಪ್ರದೇಶವು ತುಂಬಾ ಕಷ್ಟಕರವಾಗಿದೆ. ಅಲ್ಲಿನ ಸ್ಥಳೀಯರು ಹೇಗೆ ಇದನ್ನೆಲ್ಲ ನಿರ್ವಹಿಸುತ್ತಾರೆ ಎಂದು ನಾನು ಆಶ್ಚರ್ಯಪಟ್ಟೆನು.
ಪೂಜಾ, ಸ್ಥಳೀಯರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಉತ್ತರಾಖಂಡದ ಪೂನಮ್ ನೌತಿಯಾಲ್ ಅವರ ಒಟ್ಟಾರೆ ಕಥೆ ಹಾಗೂ ಕೋವಿಡ್-19ರ ಸಾಂಕ್ರಾಮಿಕ ರೋಗದ ಸಮಯದಲ್ಲಿ ಅವರ ಹೋರಾಟವನ್ನು ನಾನು ನಿಮಗೆ ಹೇಳುತ್ತೇನೆ.
ಉತ್ತರಾಖಂಡದ ಬಾಗೇಶ್ವರದ ಪೂನಮ್ ನೌತಿಯಾಲ್, ಚಾನಿ ಕೊರಾಲಿ ಕೇಂದ್ರದ ಆರೋಗ್ಯ ಕಾರ್ಯಕರ್ತೆ. ತನ್ನ ತಂಡದೊಂದಿಗೆ, ಅವರು ತನ್ನ ಪ್ರದೇಶದಲ್ಲಿ 100% ಲಸಿಕೆ ಸಾಧಿಸುವಲ್ಲಿ ಯಶಸ್ವಿಯಾಗಿದ್ದಾರೆ.
ಚಿಕ್ಕವರಿದ್ದಾಗಲೂ ಪೂನಮ್ ಸ್ವಯಂ ಪ್ರೇರಿತರಾಗಿ ಕೆಲಸ ಮಾಡುತ್ತಿರು.
ಅಪ್ಪ, ನಾನೂ ನಿನ್ನಂತೆ ಸೈನ್ಯಕ್ಕೆ ಸೇರಲು ಬಯಸುತ್ತೇನೆ.
ಪೂನಮ್, ನೀನು ಶಾಲೆಯಲ್ಲಿ ತುಂಬಾ ಚೆನ್ನಾಗಿ ಓದತ್ತಿದ್ದೀಯ. ನೀನು ಯಾಕೆ ಡಾಕ್ಟರ್ ಆಗಬಾರದು?
ಪೂನಮ್ ತನ್ನ ತಂದೆಯ ಕನಸನ್ನು ನನಸಾಗಿಸಲು ಕಷ್ಟಪಟ್ಟರೂ ಸಹ -
ಕ್ಷಮಿಸು, ಮಗಳೇ. ನಿನ್ನನ್ನು ವೈದ್ಯಕೀಯ ಕಾಲೇಜಿಗೆ ಕಳುಹಿಸಲು ನಮಗೆ ಸಾಧ್ಯವಿಲ್ಲ.
ಅಪ್ಪಾ, ದಯವಿಟ್ಟು ಕ್ಷಮೆ ಕೇಳಬೇಡಿ. ನೀವು ನನಗೆ ನೀಡಿದ ಅದ್ಭುತ ಜೀವನಕ್ಕಾಗಿ ನಾನು ತುಂಬಾ ಕೃತಜ್ಞಳಾಗಿದ್ದೇನೆ.





*ಆಕ್ಸಿಲಿಯರಿ ನರ್ಸ್ ಮಿಡ್‌ವೈಫರಿ (ಎಎನ್‌ಎಮ್)


^ಅಕ್ರೆಡಿಟೆಡ್ ಸೋಶಿಯಲ್ ಹೆಲ್ತ್ ಆಕ್ಟಿವಿಸ್ಟ್ (ASHA)



ಸವಾಲುಗಳು ನಿಜವಾಗಿಯೂ ಸಾಕಷ್ಟು ಇದ್ದವು. ಲಸಿಕೆಯನ್ನು ನೀಡಲು ತಂಡವು ಗುಡ್ಡಗಾಡು ಪ್ರದೇಶದಲ್ಲಿ ಕ್ರಮಿಸಬೇಕಾಗಿತ್ತು ಮತ್ತು ನೀರಿನಿಂದ ಆವೃತವಾಗಿದ್ದ ರಸ್ತೆಗಳ ಮೂಲಕ ಆಗಾಗ್ಗೆ ಸಾಗಬೇಕಾಗಿತ್ತು.
ಅವರು ಪ್ರತಿದಿನ 10 ಕಿಲೋಮೀಟರುಗಳವರೆಗೆ ನಡೆದು ಗರ್ಭಿಣಿಯರು, ವೃದ್ಧರು ಮತ್ತು ಅಂಗವಿಕಲರ ಮನೆಯ ಬಾಗಿಲಿಗೆ ಹೋಗಿ, ಲಸಿಕೆಗಳನ್ನು ನೀಡುತ್ತಿದ್ದರು.
ಜಾಗೃತಿಯ ಅಗತ್ಯವೂ ಇತ್ತು.
ಈ ಲಸಿಕೆ ಸಂಪೂರ್ಣವಾಗಿ ಸುರಕ್ಷಿತವಾಗಿದೆ. ವೈರಸ್‌ನಿಂದ ರಕ್ಷಿಸಿಕೊಳ್ಳಲು ನೀವು ಇದನ್ನು ತೆಗೆದುಕೊಳ್ಳಬೇಕು.
ದಯವಿಟ್ಟು ನಮ್ಮನ್ನು ನಂಬಿ.
ಆರೋಗ್ಯ ಕಾರ್ಯಕರ್ತೆಯಾಗಿರುವುದರ ಜೊತೆಗೆ ಪೂನಮ್ ಎರಡು ಮಕ್ಕಳ ತಾಯಿಯೂ ಆಗಿದ್ದರು.
ನಾನು ಮನೆಗೆ ತಲುಪಿದ ತಕ್ಷಣ, ನಾನು ನನ್ನ ಮಕ್ಕಳನ್ನು ಭೇಟಿಯಾಗುವ ಮೊದಲು ನನ್ನನ್ನು ಸ್ಯಾನಿಟೈಸ್ ಮಾಡಿಕೊಂಡು ನಂತರ ಬಟ್ಟೆಗಳನ್ನು ಬದಲಾಯಿಸುತ್ತೇನೆ. ನನಗೆ ಮಕ್ಕಳ ಆರೋಗ್ಯದ ಬಗ್ಗೆ ನನಗೆ ತುಂಬಾ ಚಿಂತೆ ಇರುತ್ತದೆ.
ನನಗೆ ಅರ್ಥವಾಯಿತು, ಪೂನಮ್. ನೀನು ಧೈರ್ಯಶಾಲಿ.
ಎಲ್ಲ ಅಡಚಣೆಗಳ ಹೊರತಾಗಿಯೂ, 2021 ರಲ್ಲಿ ಪೂನಮ್ ಮತ್ತು ಅವರ ತಂಡವು ಆರು ತಿಂಗಳೊಳಗೆ ಶೇ. 100 ರಷ್ಟು ಲಸಿಕೆ ನೀಡುವ ಗುರಿಯನ್ನು ಸಾಧಿಸಿತು. ಅವರು 1,72,000 ಜನರಿಗೆ ಲಸಿಕೆ ಹಾಕಿದ್ದರು.
ನಮ್ಮ ಗುರಿಯನ್ನು ಪೂರ್ಣಗೊಳಿಸಿದ್ದಕ್ಕಾಗಿ ನನಗೆ ತುಂಬಾ ಹೆಮ್ಮೆ ಮತ್ತು ಸಂತೋಷವಾಗಿದೆ!
ಪೂನಮ್ ಅವರ ಪ್ರಯತ್ನವನ್ನು ಪ್ರಧಾನಿ ಮೋದಿ ಶ್ಲಾಘಿಸಿದರು ಮತ್ತು ತಮ್ಮ ರೇಡಿಯೊ ಕಾರ್ಯಕ್ರಮ ಮನ್ ಕಿ ಬಾತ್‌ನಲ್ಲಿ ಅವರನ್ನು ಸಂದರ್ಶನ ಮಾಡಿದರು.
ಪೂನಮ್ ನೌತಿಯಾಲ್ ಅವರಂತಹ ಆರೋಗ್ಯ ಕಾರ್ಯಕರ್ತರಿಗೆ ಧನ್ಯವಾದಗಳು. ಇಂತಹವರಿಂದಲೇ ಭಾರತ ಹೆಚ್ಚಿನ ಲಸಿಕಾ ದರಗಳನ್ನು ಸಾಧಿಸಲು ಸಾಧ್ಯವಾಗಿರುವುದು. ಇವರೇ ದೇಶದ ನಿಜವಾದ ವೀರರು!


# ಸಂಕಲ್ಪ 95




ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಕಥೆ ಹೇಳುವ ಅವಧಿಯನ್ನು ಪೂರ್ಣಗೊಳಿಸುತ್ತಿದ್ದರು.
ನಾನು ಹೇಳಿದ ಕಥೆಯನ್ನು ನೀವೆಲ್ಲರೂ ಆನಂದಿಸಿದ್ದೀರಾ?
ಹೌದು, ಅಕ್ಕ!
ದಯವಿಟ್ಟು ಪುನಃ ಬನ್ನಿ.
ನಾವು ಭೇಟಿ ನೀಡಿದ್ದರಿಂದ ಆ ಮಕ್ಕಳು ತುಂಬಾ ಖುಷಿಪಟ್ಟರು! ನಾನು ಪುನಃ ಬಂದು ಇನ್ನಷ್ಟು ಕಥೆಗಳನ್ನು ಹೇಳಲು ಬಯಸುತ್ತೇನೆ.
ಹೌದು, ಒಳ್ಳೆಯ ಕೆಲಸ ಮಾಡುವುದು ತುಂಬಾ ತೃಪ್ತಿಕರ ಭಾವನೆ ನೀಡುತ್ತದೆ. ತಮ್ಮ ಸಮುದಾಯಕ್ಕೆ ಸಹಾಯ ಮಾಡಲು ಕ್ರೈಸ್ಟ್ ರಾಜ ಶಾಲೆಯ ಮಾಜಿ ವಿದ್ಯಾರ್ಥಿಗಳು ಒಟ್ಟಿಗೆ ಸೇರಿದಾಗ ಹೀಗೆಯೇ ಅಂದುಕೊಂಡರು.
ಕೆಲವು ವರ್ಷಗಳ ಹಿಂದೆ ಒಂದು ಆಹ್ಲಾದಕರ ಸಂಜೆಯಲ್ಲಿ, ಬಿಹಾರದ ಬೆಟ್ಟಿಯ ಕ್ರೈಸ್ಟ್ ರಾಜ ಹೈಸ್ಕೂಲಿನಲ್ಲಿ (ಕೆಆರ್‌ಎಚ್‌ಎಸ್) ಪರಸ್ಪರ ನಗು ಮತ್ತು ಸಂಭಾಷಣೆಗಳು ನಡೆಯುತ್ತಿದ್ದವು.
ವಾವ್! ಎಂತಹ ಅದ್ಭುತ ನೆನಪುಗಳು!
ಹೌದು! ಸಮಯ ಹೇಗೆ ಹೋಗುತ್ತದೆ ಗೊತ್ತೇ ಆಗುವುದಿಲ್ಲ!
ಶಾಲೆಯ ಹಳೆಯ ವಿದ್ಯಾರ್ಥಿಗಳ ಒಟ್ಟಿಗೆ ಸೇರಿದ್ದರು, ಹೀಗಾಗಿ ಹಳೆಯ ಸ್ನೇಹಿತರು ಅನೇಕ ವರ್ಷಗಳ ನಂತರ ಪರಸ್ಪರು ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಿದ್ದರು.
ಆದರೂ, ಒಂದು ಸಲಹೆಯು ಯಾವುದೋ ಮಹತ್ವದ ಸಂಗತಿಗೆ ಕಾರಣವಾಗಬಹುದೆಂದು ಹೆಚ್ಚಿನ ಹಳೆಯ ವಿದ್ಯಾರ್ಥಿಗಳಿಗೆ ತಿಳಿದಿರಲಿಲ್ಲ.
ಫ್ರೆಂಡ್ಸ್, ಹಿಂದುಳಿದ ಅಥವ ಅವಕಾಶ ವಂಚಿತರಿಗಾಗಿ ಆರೋಗ್ಯ ಶಿಬಿರ ಆಯೋಜಿಸಬೇಕೆಂಬ ಆಲೋಚನೆ ನನ್ನನ್ನು ಬಹಳವಾಗಿ ಕಾಡುತ್ತಿದೆ.
ಅದ್ಭುತವಾದ ಯೋಚನೆ! ನಾನು ಎಷ್ಟು ಸಾಧ್ಯವೋ ಅಷ್ಟು ಕೊಡುಗೆ ನೀಡಲು ಇಷ್ಟಪಡುತ್ತೇನೆ.
ನನ್ನನ್ನೂ ಪರಿಗಣಿಸಿ!
ಮತ್ತು ಈ ಸಾಮಾಜಿಕ ಕಾರ್ಯಕ್ಕೆ ನಮ್ಮೊಂದಿಗೆ ಕೈಜೋಡಿಸಲು ಸ್ವಯಂಸೇವಕರ ಸಮುದಾಯವೊಂದು ಮುಂದೆ ಬಂದಿದೆ.












*‘ದೃಢ ಸಂಕಲ್ಪ’

ˆಬಿಹಾರದ ಪಶ್ಚಿಮ ಚಂಪಾರಣ್ ಜಿಲ್ಲೆಯ ಒಂದು ಹಳ್ಳಿ


2020 ರಲ್ಲಿ ಕೋವಿಡ್-19 ಆದಾಗ ಸಂಕಲ್ಪ್ 95, ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ವೈಯಕ್ತಿಕ ಸುರಕ್ಷತಾ ಕಿಟ್‌ಗಳು ಮತ್ತು ಸ್ಯಾನಿಟೈಸರ್ ಅನ್ನು ಪೂರೈಸಿತು.
ಅದೇ ವರ್ಷದ ಅಂತ್ಯದಲ್ಲಿ ಉಂಟಾದ ಪ್ರವಾಹದ ಸಮಯದಲ್ಲಿ ಸ್ವಯಂಸೇವಕರು ತಮ್ಮ ಮನೆಗಳನ್ನು ಕಳೆದುಕೊಂಡವರಿಗೆ ಆಹಾರ ಮತ್ತು ಆಶ್ರಯವನ್ನು ಒದಗಿಸಿದರು...
ಇದು ನಮಗೆ ತುಂಬಾ ಕಷ್ಟಕರವಾದ ವರ್ಷವಾಗಿದೆ. ನಮಗೆ ಸಹಾಯ ಮಾಡಿದ್ದಕ್ಕಾಗಿ ಧನ್ಯವಾದಗಳು.
ಮತ್ತು 2021 ರಲ್ಲಿ, ಇವರು ರೋಗಿಗಳಿಗೆ ಆಮ್ಲಜನಕದ ಸಿಲಿಂಡರುಗಳನ್ನು ಒದಗಿಸಿದರು ಮತ್ತು ಕೋವಿಡ್-19 ರ ಕುರಿತು ಜಾಗೃತಿ ಶಿಬಿರಗಳನ್ನು ನಡೆಸಿದರು.
ಕೋವಿಡ್-19 ರ ಲಸಿಕೆಯನ್ನು ಪರಿಚಯಿಸಿದ ನಂತರ, ಸಂಕಲ್ಪ್ 95, ಲಸಿಕಾ ಕಾರ್ಯಕ್ರಮಗಳನ್ನು ಆಯೋಜಿಸಲು ಇತರ ಸರ್ಕಾರೇತರ ಸಂಸ್ಥೆಗಳೊಂದಿಗೆ ಸೇರಿಕೊಂಡಿತು.
ಇವರ ಕೆಲಸ ಪ್ರಧಾನಿ ಮೋದಿಯವರ ಮೆಚ್ಚುಗೆಗೆ ಪಾತ್ರವಾಯಿತು.
ಉಚಿತ ವೈದ್ಯಕೀಯ ಪರೀಕ್ಷೆಗಳಾಗಲಿ, ಉಚಿತ ಔಷಧಿ ವಿತರಣೆಯಾಗಲಿ ಅಥವಾ ಜಾಗೃತಿ ಮೂಡಿಸುವ ಮೂಲಕವಾಗಿ ಸಂಕಲ್ಪ್ 95 ಎಲ್ಲರಿಗೂ ದಾರಿದೀಪವಾಗಿದೆ.


# ಸರಪಂಚ್ ಬಲ್ಬೀರ್ ಕೌರ್





*ಗ್ರಾಮದ ಮುಖ್ಯಸ್ಥ

^ಜಮ್ಮುವಿನ ಒಂದು ಹಳ್ಳಿ



ಬಲ್ಬೀರ್ ಕೌರ್ ಅವರ ಪ್ರಯತ್ನದ ಬಗ್ಗೆ ಗ್ರಾಮಸ್ಥರಿಗೆ ತಿಳಿದಾಗ -
ಸರಪಂಚರೇ, ನಾವು ನಿಮಗೆ ಸಹಾಯ ಮಾಡಲು ಬಂದಿದ್ದೇವೆ.
ಧನ್ಯವಾದಗಳು!
ಕೆಲವು ದಿನಗಳ ನಂತರ-
ನಮ್ಮ ಹಳ್ಳಿಯ ಬಹುತೇಕ ಬೀದಿಗಳನ್ನು ನಾವು ಸ್ಯಾನಿಟೈಸ್ ಮಾಡಿ ಮುಗಿಸಿದ್ದೇವೆ ಅನಿಸುತ್ತಿದೆ.
ಮುಂದಿನ ಹಂತವೆಂದರೆ ಹೊರಗಿನವರು ನಮ್ಮ ಹಳ್ಳಿಗೆ ಬರದಂತೆ ಮತ್ತು ಇಲ್ಲಿನ ಜನರಿಗೆ ಸೋಂಕು ಹರಡದಂತೆ ತಡೆಯುವುದು.
PANCHAYAT TREVA
ಬಲ್ಬೀರ್ ಕೌರ್ ತಕ್ಷಣವೇ ಪಂಚಾಯತಿ ಸಭೆಯನ್ನು ಕರೆದರು.
ಲಾಕ್‌ಡೌನ್ ಘೋಷಿಸುವ ಸಾಧ್ಯತೆ ಇದೆ, ಹೀಗಾಗಿ ನಮ್ಮ ಹಳ್ಳಿಗರು ನಗರಗಳಿಂದ ಮನೆಗೆ ಮರಳಿ ಬರುತ್ತಾರೆ. ಅವರನ್ನು ಒಂದು ವಾರ ಪ್ರತ್ಯೇಕವಾಗಿರಿಸಲು ನಾವು ಕ್ವಾರಂಟೈನ್ ಕೇಂದ್ರವನ್ನು ನಿರ್ಮಿಸಬೇಕಾಗಿದೆ.
ಆದರೆ ಎಲ್ಲಿ? ಪಂಚಾಯಿತ್ ಮನೆ ಮತ್ತು ಸಮುದಾಯ ಭವನದ ನವೀಕರಣ ಕೆಲಸ ನಡೆಯುತ್ತಿದೆ.
ನಮ್ಮ ಹಳ್ಳಿಯ ಹೊರಗೆ ಆರ್ನಿಯಾ ಸೆಕ್ಟರ್‌ನಲ್ಲಿ ಜಾಗವಿದೆ, ಅದನ್ನು ಕ್ವಾರಂಟೈನ್ ಕೇಂದ್ರವಾಗಿ ಪರಿವರ್ತಿಸಬಹುದು.


ತಕ್ಷಣದಲ್ಲೇ ಸಿದ್ಧತೆಗಳು ಬಹಳ ತ್ವರಿತ ಗತಿಯಲ್ಲಿ ಪ್ರಾರಂಭವಾದವು.
ಕೈ ತೊಳೆಯಲು ಸಾಕಷ್ಟು ನೀರು ಮತ್ತು ಸೋಪು ಇರುವಂತೆ ನೋಡಿಕೊಳ್ಳಿ. ಹಳ್ಳಿಗೆ ಹಿಂದಿರುಗಿ ಬರುವವರಿಗೆ ಹೊದಿಕೆಗಳು ಮತ್ತು ನೀರಿನ ಬಾಟಲಿಗಳನ್ನು ಸಿದ್ಧವಾಗಿಡಿ.
ಕೆಲವು ವಾರಗಳ ನಂತರ, 30 ಹಾಸಿಗೆಗಳ ಕ್ವಾರಂಟೈನ್ ಕೇಂದ್ರ ಸಿದ್ಧವಾಯಿತು.
ಮೊದಲ ಗುಂಪಿನ ಜನರು ಬಂದಾಗ -
ನೀವು ಒಂದು ವಾರ ಅಥವಾ ನಿಮ್ಮ ಕೋವಿಡ್ ವರದಿ ನೆಗೆಟೀವ್ ಬರುವವರೆಗೆ ಇಲ್ಲಿಯೇ ಇರಬೇಕಾಗುತ್ತದೆ. ಇದು ನಿಮ್ಮ ಕುಟುಂಬದ ಸುರಕ್ಷತೆಗಾಗಿ ಎಂಬುದನ್ನು ದಯವಿಟ್ಟು ಅರ್ಥಮಾಡಿಕೊಳ್ಳಿ.
ಒಂದು ವಾರದ ನಂತರ -
ಮರಳಿ ಬಂದ ಎಲ್ಲರ ಪರೀಕ್ಷೆ ನೆಗೆಟಿವ್ ಎಂದು ಬಂದಿದೆ. ನಮ್ಮ ಗ್ರಾಮ ಸುರಕ್ಷಿತವಾಗಿದೆ.
ವಾವ್, ಅದ್ಭುತ!
ಮುಂದಿನ ಕೆಲವು ತಿಂಗಳುಗಳಲ್ಲಿ, ಅನೇಕ ಸಂದರ್ಶಕರು ಕ್ವಾರಂಟೈನ್ ಕೇಂದ್ರವನ್ನು ಬಳಸಿದರು ಮತ್ತು ಅವರ ಕೋವಿಡ್ ಪರೀಕ್ಷಾ ವರದಿ ನೆಗೆಟೀವ್ ಇದ್ದರೆ ಮಾತ್ರ ಟ್ರೆವಾ ಗ್ರಾಮವನ್ನು ಪ್ರವೇಶಿಸುತ್ತಿದ್ದರು.
ಧನ್ಯವಾದಗಳು, ಸರಪಂಚರೇ. ಈ ಸಾಂಕ್ರಾಮಿಕ ಕಾಯಿಲೆಯ ಸಮಯದಲ್ಲಿ ನಮ್ಮ ಗ್ರಾಮವನ್ನು ಸುರಕ್ಷಿತವಾಗಿಡುವಲ್ಲಿ ನೀವು ಯಶಸ್ವಿಯಾಗಿದ್ದೀರಿ.
ನಾನು ನನ್ನ ಕರ್ತವ್ಯವನ್ನಷ್ಟೇ ಮಾಡುತ್ತಿದ್ದೆ.
ಸರಪಂಚ್ ಬಲ್ಬೀರ್ ಕೌರ್ ಅವರ ಪ್ರಯತ್ನವನ್ನು ಪ್ರಧಾನಿ ಮೋದಿಯವರು ತಮ್ಮ ರೇಡಿಯೋ ಕಾರ್ಯಕ್ರಮವಾದ ಮನ್ ಕಿ ಬಾತ್‌ನಲ್ಲಿ ಶ್ಲಾಘಿಸಿದರು.

# ಅಜಿತ್ ಮೋಹನ್ ಚೌಧರಿ





*ಹಿರಿಯರನ್ನು ಸಂಬೋಧಿಸುವ ಗೌರವಯುತ ಪದ


ಈ ಸಮಸ್ಯೆ ಅಜಿತನನ್ನು ಕಾಡಿತು.
ಚಿಕಿತ್ಸೆ ನೀಡುವಿಕೆ ಒಂದು ಆದರ್ಶಯುತ ವೃತ್ತಿಯಾಗಬೇಕು ಆದರೆ ಆರೋಗ್ಯ ಕಾಳಜಿ ತುಂಬಾ ದುಬಾರಿ ಮತ್ತು ಕಮರ್ಷಿಯಲ್ ಆಗಿದೆ. ಸಹಾಯ ಮಾಡಲು ನಾನು ಏನು ಮಾಡಬಹುದು?
ಒಂದು ದಿನ -
ನೀವು ಏನು ಮಾಡುತ್ತಿದ್ದೀರಿ, ಡಾಕ್ಟರ್ ಸಾಹೇಬ್ರೆ?
ಆಸ್ಪತ್ರೆಗೆ ಹೋಗಿ ಹಣ ಪಾವತಿಸಲು ಸಾಧ್ಯವಾಗದವರಿಗೆ ನಾನು ಉಚಿತ ವೈದ್ಯಕೀಯ ಚಿಕಿತ್ಸೆ ನೀಡುತ್ತಿದ್ದೇನೆ.
ಇಲ್ಲಿ? ಫುಟ್ ಪಾತ್ ಮೇಲೆ?
ರಸ್ತೆ ಬದಿಯ ಕ್ಲಿನಿಕ್ ಬಗ್ಗೆ ಸುದ್ದಿ ಹರಡಿತು ಮತ್ತು ಅನೇಕ ಜನರು ತಮಗೆ ಬೇಕಾದ ಆರೈಕೆಯನ್ನು ಪಡೆದರು.
ನಿಮ್ಮ ಮಗಳು ಕಮಲಾ ಹೇಗಿದ್ದಾಳೆ?
ಈಗ ಪರವಾಗಿಲ್ಲ, ವೈದ್ಯರೆ. ಅವಳು ಇಂದು ಶಾಲೆಗೆ ಹೋಗಿದ್ದಾಳೆ.
ಅಜಿತ್, ತಮ್ಮ ರೋಗಿಗಳಿಗೆ ತಪಾಸಣೆಯ ಜೊತೆಗೆ, ಉಚಿತ ಔಷಧಿಗಳನ್ನು ಸಹ ನೀಡುತ್ತಿದ್ದರು.





*ಸರಕಾರೇತರ ಸಂಸ್ಥೆ (ನಾನ್ ಗವರ್ನಮೆಂಟಲ್ ಆರ್ಗನೈಸೇಷನ್-ಎನ್.ಜಿ.ಒ.)

# ಮಿಲೆಟ್ಸ್ ಕೆಫೆ





*ಯುನೈಟೆಡ್ ನೇಷನ್ಸ್ (ಯು.ಎನ್.) ಛತ್ತೀಸ್‌ಗಢದ ನಗರ





*ನಗರದ ಜೀವನೋಪಾಯಕ್ಕಾಗಿ ಬದ್ಧವಾಗಿರುವ ಸ್ವ-ಸಹಾಯ ಗುಂಪು


# ಸೈದುಲ್ ಲಸ್ಕರ್





*elder brother


ಆದರೆ ಮಾರುಫಾ ಸ್ಥಿತಿ ಇನ್ನೂ ಹದಗೆಟ್ಟಿತು.
ಅತ್ತಿಗೆ, ನನಗೆ ಉಸಿರಾಡಲು ಆಗುತ್ತಿಲ್ಲ.
ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಗಿದೆ.
ಆಸ್ಪತ್ರೆ ತಲುಪಲು ನಾವು ಮುಂದಿನ ಊರಿಗೆ ಹೋಗಬೇಕು. ಬೇರೆ ದಾರಿಯಿಲ್ಲ.
ಸೈದುಲ್ ಮತ್ತು ಅವರ ಪತ್ನಿ ಶಮೀಮಾ ಅವರು ಮಾರುಫಾ ಅವರೊಂದಿಗೆ ಆಸ್ಪತ್ರೆಗೆ ಧಾವಿಸಿದರು -
ಇವರನ್ನು ಅಡ್ಮಿಟ್ ಮಾಡಬೇಕು. ಚಿಕಿತ್ಸೆಗೆ ಒಂದು ಲಕ್ಷ ರೂಪಾಯಿ ವೆಚ್ಚವಾಗುತ್ತದೆ.
ನಾವು ಅದನ್ನು ಭರಿಸಲು ಸಾಧ್ಯವಿಲ್ಲ. ನಾವು ಏನು ಮಾಡುವುದು?
ದುಃಖಕರವೆಂದರೆ, ಸೈದುಲ್ ಮತ್ತು ಶಮೀಮಾ ಹಣ ಸಂಗ್ರಹಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡಿದರೂ, ಮಾರುಫಾ 17ನೇ ವಯಸ್ಸಿನಲ್ಲಿ ತನ್ನ ಪ್ರಾಣ ಕಳೆದುಕೊಂಡರು.
ಹಣದ ಕೊರತೆಯಿಂದ ಯಾರೂ ಪ್ರಾಣ ಕಳೆದುಕೊಳ್ಳಬಾರದು. ನಾನು ಅತ್ಯಂತ ಕಡಿಮೆ ವೆಚ್ಚದಲ್ಲಿ ಜನರಿಗೆ ಚಿಕಿತ್ಸೆ ನೀಡುವ ಆಸ್ಪತ್ರೆಯನ್ನು ನಿರ್ಮಿಸಲಿದ್ದೇನೆ.
ಮರುದಿನ -
ಶಮೀಮಾ, ನನಗೆ ಬಡವರಿಗಾಗಿ ಆಸ್ಪತ್ರೆ ಕಟ್ಟಬೇಕು ಆದರೆ ನಿವೇಶನ ಕೊಳ್ಳಲು ಮೂರು ಲಕ್ಷ ಬೇಕು.
ನನ್ನ ಎಲ್ಲಾ ಆಭರಣಗಳನ್ನು ತೆಗೆದುಕೊಂಡು ಮಾರಾಟ ಮಾಡಿ. ಇದರಿಂದ ಬರುವ ಹಣ ನಿಮಗೆ ಆಸ್ಪತ್ರೆ ಆರಂಭಿಸಲು ಸಹಾಯ ಮಾಡಬಹುದು.
ಹೀಗೆ ಹಣ ಸಂಗ್ರಹಿಸುವ ಸೈದುಲ್ ಪಯಣ ಆರಂಭವಾಯಿತು.
ನಂತರ ಅವರು ಧನ ಸಹಾಯಕ್ಕಾಗಿ ಪ್ರಯಾಣಿಕರನ್ನು ಕೇಳಲು ಪ್ರಾರಂಭಿಸಿದರು.
ಮೇಡಂ, ನನ್ನ ಹಳ್ಳಿ ಪುನ್ರಿಯಲ್ಲಿ ಆಸ್ಪತ್ರೆಯನ್ನು ಪ್ರಾರಂಭಿಸಲು ನಾನು ದೇಣಿಗೆ ಸಂಗ್ರಹಿಸುತ್ತಿದ್ದೇನೆ. ನೀವು ಎಷ್ಟೇ ಹಣ ನೀಡಿದರು ಪರವಾಗಿಲ್ಲ.

*ನಾದಿನಿ



ತೆಗೆದುಕೊಳ್ಳಿ, ಸದ್ಯಕ್ಕೆ ಈ 100 ರೂಪಾಯಿ ತೆಗೆದುಕೊಂಡು ನಿಮ್ಮ ನಂಬರ್ ಕೊಡಿ. ನನಗೆ ಕೆಲಸ ಸಿಕ್ಕಿದಾಗ ನಾನು ನಿಮ್ಮನ್ನು ಸಂಪರ್ಕಿಸಿ ಇನ್ನಷ್ಟು ಸಹಾಯ ಮಾಡುತ್ತೇನೆ.
ಧನ್ಯವಾದಗಳು, ಮೇಡಮ್!
ಅಂದು 100 ರೂ ನೀಡಿದ್ದು 23 ವರ್ಷದ ಸೃಷ್ಟಿ ಘೋಷ್, ಕೆಲವು ವರ್ಷಗಳ ನಂತರ ಸೈದುಲ್‌ಗೆ ತನ್ನ ಮೊದಲ ತಿಂಗಳ ಸಂಪೂರ್ಣ ಸಂಬಳ 25,000 ರೂಗಳನ್ನು ನೀಡಿದಳು.
ಸೈದುಲ್ ಮುಂದಿನ 12 ವರ್ಷಗಳವರೆಗೆ ಪ್ರಯಾಣಿಕರು, ಗ್ರಾಮಸ್ಥರು ಮತ್ತು ಕೆಲವು ಸರ್ಕಾರೇತರ ಸಂಸ್ಥೆಗಳಿಂದ ಹಣವನ್ನು ಸಂಗ್ರಹಿಸುವುದನ್ನು ಮುಂದುವರೆಸಿದರು. ಅಂತಿಮವಾಗಿ 2018 ರಲ್ಲಿ, ಮರುಫಾ ಸ್ಮೃತಿ ವೆಲ್‌ಫೇರ್ ಫೌಂಡೇಶನ್ ಅನ್ನು ಸೃಷ್ಟಿಯವರಿಂದ ಉದ್ಘಾಟನೆ ಮಾಡಿಸಿದರು.
CLAP
CLAP
CLAP
ಬಹಳ ಹೆಮ್ಮೆ ಎನಿಸುತ್ತಿದೆ!
ನೀವು ನಮ್ಮ ಮಾರುಫಾ ಸ್ಥಾನವನ್ನು ತುಂಬಿದಿರಿ.
ಸೈದುಲ್ ಆಸ್ಪತ್ರೆ ನಿರ್ಮಿಸಲು ಇದುವರೆಗೆ 36 ಲಕ್ಷ ರೂಗಳನ್ನು ಖರ್ಚು ಮಾಡಿದ್ದಾರೆ.
ಹೊರ ರೋಗಿಗಳಿಗೆ ನೆಲಮಹಡಿ. ಮೊದಲ ಮಹಡಿಯಲ್ಲಿ ರೋಗಶಾಸ್ತ್ರೀಯ ಪ್ರಯೋಗಾಲಯಗಳ ಸೌಲಭ್ಯಗಳಿವೆ.
ಕಲ್ಯಾಣ ಸಂಸ್ಥೆಯಿಂದ ಎಕ್ಸ್ ರೇ ಮತ್ತು ಇಇಜಿ ಯಂತ್ರವನ್ನು ಪಡೆದಿದ್ದೇವೆ.
ಸಹಾಯ ಮಾಡಲು ಎಷ್ಟೊಂದು ಜನ ಮುಂದೆ ಬರುತ್ತಿದ್ದಾರೆ, ಬಹಳ ಆಶ್ಚರ್ಯವಾಗುತ್ತಿದೆ.
ತನ್ನ ಆಸ್ಪತ್ರೆಯಲ್ಲಿ ಹೆಚ್ಚಿನ ಸೌಲಭ್ಯಗಳನ್ನು ನಿರ್ಮಿಸಬೇಕೆಂಬ ಒಂದೇ ಒಂದು ಗುರಿಯೊಂದಿಗೆ ಸೈದುಲ್ ಹಣವನ್ನು ಸಂಗ್ರಹಿಸುವುದನ್ನು ಮುಂದುವರೆಸುತ್ತಾನೆ-
ಪುನ್ರಿಯ ಸುತ್ತಮುತ್ತಲಿನ 100 ಹಳ್ಳಿಗಳ ಜನರಿಗೆ ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆಯನ್ನು ಒದಗಿಸಲು ನಾನು ಬಯಸುತ್ತೇನೆ.
ಪ್ರಧಾನಿ ಮೋದಿಯವರ ರೇಡಿಯೋ ಕಾರ್ಯಕ್ರಮವಾದ ಮನ್ ಕಿ ಬಾತ್‌ನಲ್ಲಿ ಅವರ ಪ್ರಯತ್ನಗಳನ್ನು ಪ್ರಶಂಸಿಸಲಾಗಿದೆ.

# ನಳಿನಿ ಸಿಂಗ್





*ಹಿಮಾಚಲ ಪ್ರದೇಶದ ಜಿಲ್ಲೆ

ˆನಿ-ನಿರ್ಮೂಲನೆ, ಕ್ಷಯ್-ಟಿಬಿ, ಮಿತ್ರ-ಸ್ನೇಹಿತ



...ನಾನು ನನ್ನ ಪಿಗ್ಗಿ ಬ್ಯಾಂಕಿನಲ್ಲಿ ಹಣವನ್ನು ಉಳಿಸುತ್ತಿದ್ದೇನೆ. ನಾನು ಅದನ್ನು ಒಡೆದು ಅವರಿಗೋಸ್ಕರ ಬಳಸುತ್ತೇನೆ.
ತನ್ನ ತಂದೆಯ ಸಹಾಯದಿಂದ, ನಳಿನಿ ಟಿಬಿ ಪೀಡಿತ ಮಕ್ಕಳಿಗಾಗಿ ಆಹಾರ ಮತ್ತು ಇತರ ವಸ್ತುಗಳನ್ನು ಹೊಂದಿರುವ ವಿಶೇಷ 'ನಿಕ್ಷಯ್' ಕಿಟ್‌ಗಳನ್ನು ತಯಾರಿಸಲು ನಿರ್ಧರಿಸಿದಳು.
ಇದು ಉತ್ತಮ ಉಪಾಯ, ನಳಿನಿ! ಇದರಿಂದ ರೋಗಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ.
ಇವುಗಳನ್ನು ವಿತರಿಸಲು ಹೋಗೋಣ.
ಮುಂದಿನ ವಾರ, ನಳಿನಿ ದಯೆ ಕುರಿತ ತನ್ನ ಯೋಜನೆಯನ್ನು ತರಗತಿಯೊಂದಿಗೆ ಹಂಚಿಕೊಂಡ ನಂತರ -
ನಳಿನಿ, ನೀನು ನಮ್ಮ ದಯೆ ಯೋಜನೆಯಲ್ಲಿ ಒಬ್ಬಳು ಸ್ಟಾರ್ ಆಗಿರುವೆ! ಇದನ್ನು ಮಾಡಲು ನಿನಗೆ ಸ್ಫೂರ್ತಿ ಏನು?
ನನ್ನ ಅಪ್ಪ ಮತ್ತು ಅಮ್ಮ ನನಗೆ ಆರೋಗ್ಯಕರ ಆಹಾರವನ್ನು ಒದಗಿಸುತ್ತಾರೆ ಆದ್ದರಿಂದ ನಾನು ಬಲಶಾಲಿಯಾಗಬಹುದು. ಆ ಅನಾರೋಗ್ಯದ ಮಕ್ಕಳಿಗಾಗಿ ನಾನು ಅದೇ ರೀತಿ ಮಾಡಲು ಬಯಸಿದೆನು, ಇದರಿಂದ ಅವರು ಟಿಬಿಯಿಂದ ಮುಕ್ತರಾಗಬಹುದು.
ಮುಂದಿನ ಎರಡು ತಿಂಗಳಲ್ಲಿ, ನಳಿನಿಯ ತಂದೆ ನಿಕ್ಷಯ್ ಕಿಟ್‌ಗಳನ್ನು ತಯಾರಿಸಲು ಅವಳ ಪಿಗ್ಗಿ ಬ್ಯಾಂಕ್‌ನಿಂದ 10,000 ರೂಪಾಯಿಗಳನ್ನು ನೀಡುವಂತೆ ಸಹಾಯ ಮಾಡಿದರು.
ನಳಿನಿ, ನಿನ್ನ ಬಗ್ಗೆ ನಮಗೆಲ್ಲರಿಗೂ ಹೆಮ್ಮೆ. ಪ್ರತಿಯೊಬ್ಬರೂ ನಿನ್ನಂತೆ ಇತರರಿಗೆ ಸಹಾಯ ಮಾಡಿದರೆ, ನಮ್ಮ ಜನರು ಆರೋಗ್ಯ ಮತ್ತು ಸಂತೋಷದಿಂದ ಇರಬಹುದು.
टी.बी. हारेगा
इंडिया जीतेगा
ತನ್ನ ರೇಡಿಯೋ ಕಾರ್ಯಕ್ರಮದಲ್ಲಿ, ಮನ್ ಕಿ ಬಾತ್‌ನಲ್ಲಿ 8 ವರ್ಷದ ನಳಿನಿ ಅವರ ಉದಾರ ದೇಣಿಗೆಗಾಗಿ ಪ್ರಧಾನಿ ಮೋದಿ ಶ್ಲಾಘಿಸಿದರು, ಇದು ಭಾರತವನ್ನು ಟಿಬಿ ಮುಕ್ತಗೊಳಿಸಲು ಸಹಾಯ ಮಾಡುತ್ತದೆ ಎಂದು ಹೇಳಿದರು.


# ಲಕ್ಷ್ಮಿಕುಟ್ಟಿ




*ಒಂದು ಗ್ರಾಮ, ಅಂದರೆ ಚಿನ್ನದ ಶಿಖರ

ˆಹೆರಿಗೆಯಲ್ಲಿ ಸಹಾಯ ಮಾಡಲು ತರಬೇತಿ ಪಡೆದವರು



ಒಂದು ದಿನ, ಶಾಲೆಗೆ ಹೋಗುವ ದಾರಿಯಲ್ಲಿ -
ಅಯ್ಯೋ! ಲಕ್ಷ್ಮಿ, ಜೇಡ ಕಚ್ಚಿತು! ನಾನು ಅದನ್ನು ಕೊಲ್ಲುತ್ತೇನೆ.
ಇಲ್ಲ, ಮಾಧನ್! ಕಚ್ಚಿದ್ದನ್ನು ವಾಸಿ ಮಾಡಲು ಸ್ವಲ್ಪ ಬೇವಿನ ಎಲೆಗಳು ಮತ್ತು ಅರಿಶಿನ ಸಿಕ್ಕಿದರೆ ಸಾಕು. ದೇವರನ್ನು ನೆನೆಸಿಕೊ ಮತ್ತು ಜೇಡವನ್ನು ಬಿಟ್ಟುಬಿಡು.
ಲಕ್ಷ್ಮಿ ಎಂಟನೇ ತರಗತಿಗೆ ಶಾಲೆಯನ್ನು ಬಿಡಬೇಕಾಯಿತು ಆದರೆ ಗಿಡಮೂಲಿಕೆಗಳ ಔಷಧಿಗಳ ಬಗ್ಗೆ ಕಲಿಯುವುದನ್ನು ಮುಂದುವರೆಸಿದಳು.
ಲಕ್ಷ್ಮಿ ಕುಟ್ಟಿಗೆ 16 ವರ್ಷವಾದಾಗ ಮಾಧನ್‌ನನ್ನು ಮದುವೆಯಾದಳು. ಇವರಿಗೆ ಧರಣೇಂದ್ರನ್, ಲಕ್ಷ್ಮಣನ್ ಮತ್ತು ಶಿವ ಪ್ರಸಾದ್ ಎಂಬ ಮೂವರು ಗಂಡು ಮಕ್ಕಳಿದ್ದರು.
ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಬೇಕು. ಅವರು ಈ ಕಾಡಿನಲ್ಲಿ ಶಾಶ್ವತವಾಗಿ ಉಳಿಯಬಾರದು.
1995 ರಲ್ಲಿ, ಕಾಣಿ ಬುಡಕಟ್ಟಿನ ಚಿಕಿತ್ಸಾ ಪದ್ಧತಿಗಳನ್ನು ಜೀವಂತವಾಗಿಟ್ಟಿದ್ದಕ್ಕಾಗಿ ಲಕ್ಷ್ಮಿ ಕುಟ್ಟಿ ಕೇರಳ ಸರ್ಕಾರದಿಂದ ನಾಟಿ ವೈದ್ಯ ರತ್ನ ಪ್ರಶಸ್ತಿಯನ್ನು ಪಡೆದರು.
ನಮ್ಮ ಬುಡಕಟ್ಟು ಔಷಧೀಯ ಸಸ್ಯಗಳ ಬಗ್ಗೆ ಸಾಕಷ್ಟು ತಿಳಿದುಕೊಂಡಿದೆ. ನನಗೆ ತಿಳಿದಿರುವುದೆಲ್ಲವನ್ನೂ ನನ್ನ ತಾಯಿ ನನಗೆ ಕಲಿಸಿದರು. ನನ್ನ ಜ್ಞಾನವನ್ನು ಹಂಚಿಕೊಳ್ಳಲು ನನಗೆ ಸಂತೋಷವಾಗುತ್ತಿದೆ.
2005 ರಲ್ಲಿ ಲಕ್ಷ್ಮಿಯವರ ಹಿರಿಯ ಮಗ ಧರಣೇಂದ್ರನನ್ನು ಕಾಡಿನ ದೇವಾಲಯದ ಬಳಿ ಆನೆಯೊಂದು ತುಳಿದು ಹಾಕಿತು.
ಬೇಗ ನಡಿಯಿರಿ! ಅವನನ್ನು ಆಸ್ಪತ್ರೆಗೆ ಸೇರಿಸೋಣ.
ಲಕ್ಷ್ಮಿ, ಈ ದಟ್ಟ ಅರಣ್ಯದಲ್ಲಿ ಸಹಾಯ ಪಡೆಯಲು ಯಾವುದೇ ಮಾರ್ಗವಿಲ್ಲ.
ಧರಣೇಂದ್ರನ್ ತೀರಿ ಹೋದನು.
ಸ್ವಲ್ಪ ಸಮಯದ ನಂತರ, ಲಕ್ಷ್ಮಿ ತನ್ನ ಕಿರಿಯ ಮಗ ಶಿವ ಪ್ರಸಾದ್‌ನನ್ನು ಹಾವು ಕಡಿತದಿಂದ ಕಳೆದುಕೊಂಡಳು. ಆ ದಿನ ರಾತ್ರಿ -
ಈ ಭಾರಿ ಮಳೆಯಲ್ಲಿ ನಾವು ಕಾಡಿನ ಮೂಲಕ ಆಸ್ಪತ್ರೆ ತಲುಪಲು ಸಾಧ್ಯವಿಲ್ಲ. 1952ರಲ್ಲೇ ಅವರು ಭರವಸೆ ನೀಡಿದ್ದ ರಸ್ತೆಗಳನ್ನು ನಿರ್ಮಿಸಿದ್ದರೆ!





*'ಸಾಂಪ್ರದಾಯಿಕ ಜ್ಞಾನ, ಅರಣ್ಯ ಜ್ಞಾನ'
^ಮಲಯಾಳಮ್‌ನಲ್ಲಿ ತಂದೆಯ ತಾಯಿ

**ಕಾಡಿನ ಅಜ್ಜಿ

# ರಾಮ ಸುಬ್ಬಾ ರೆಡ್ಡಿ




*ಹಣ್ಣು ಮತ್ತು ತರಕಾರಿಗಳ ಕುರಿತು ಅಧ್ಯಯನ ನಡೆಸುವ ಕೃಷಿಯ ಶಾಖೆ




*ಗುಣಪಡಿಸುವ ಗುಣಗಳನ್ನು ಹೊಂದಿರುವ ಐದು ಸಿರಿಧಾನ್ಯಗಳನ್ನು ಪುನಃಪರಿಚಯಿಸಿದ ಆಹಾರ ವಿಜ್ಞಾನಿ



मन की बात 100

MANN KI BAAT 100

# ಮನ್ ಕಿ ಬಾತ್

## ಸಂಪುಟ 7


ಒಂದು ದೇಶದ ಸಂಪತ್ತು ಆ ದೇಶದ ಪ್ರಜೆಗಳ ಆರೋಗ್ಯದ ಮೇಲೆ ಅವಲಂಬಿತವಾಗಿರುತ್ತದೆ. ಮನ್ ಕಿ ಬಾತ್‌ನ ಏಳನೆಯ ಸಂಚಿಕೆಯು ತಮ್ಮ ಸಣ್ಣ ಪುಟ್ಟ ನೆರವುಗಳಿಂದ  ತಮ್ಮ ಸುತ್ತಮುತ್ತಲಿನವರ ಆರೋಗ್ಯದಲ್ಲಿ ಮತ್ತು ಬದುಕಿನಲ್ಲಿ ಗಮನಾರ್ಹ ಸುಧಾರಣೆಗಳನ್ನು ತಂದ ಸಾಮಾನ್ಯ ಜನರ ಬಗ್ಗೆಯಾಗಿದೆ.

ಕೋವಿಡ್ ಸಮಯದಲ್ಲಿ, ಲಸಿಕೆ ಪಡೆದುಕೊಳ್ಳಲು ಲಸಿಕಾ ಕೇಂದ್ರಗಳಿಗೆ ಹೋಗಲು ಸಾಧ್ಯವಾಗದ ದೂರದ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ಜನರಿಗೆ ಲಸಿಕೆ ತಲಪುವಂತೆ ಮಾಡಿ ಶೇ 100 ವ್ಯಾಕ್ಸಿನೇಶನ್ ಆಗುವಂತೆ ನೋಡಿಕೊಂಡವರು ಉತ್ತರಾಖಂಡದ ನರ್ಸ್ ಪೂನಮ್ ನೌತಿಯಾಲ್.

ಕೇರಳದ ಕಾಣಿ ಬುಡಕಟ್ಟಿಗೆ ಸೇರಿದ ಲಕ್ಷ್ಮಿ ಕುಟ್ಟಿಯವರು ಹಾವು ಕಚ್ಚಿದ ಜನರಿಗೆ ಸಾಂಪ್ರದಾಯಕ ಚಿಕಿತ್ಸೆ ಮತ್ತು ಔಷಧಗಳನ್ನು ನೀಡುವ ಮೂಲಕ 350ಕ್ಕೂ ಹೆಚ್ಚು ಜನರ ಜೀವವನ್ನುಳಿಸಿದ್ದಾರೆ.

ನಳಿನಿ ಸಿಂಗ್ ಮತ್ತು ದಿಕರ್ ಸಿಂಗ್ ಮೇವಾರಿಯವರು 'ನಿಕ್ಷಯ್ ಮಿತ್ರ'ರಾಗಿ ಕ್ಷಯದಿಂದ ಬಳಲುತ್ತಿರುವ ರೋಗಿಗಳ ಸಹಾಯಕ್ಕೆ ನಿಂತಿದ್ದಾರೆ.

ದೇಶದ ವಿವಿಧ ಕಡೆಗಳಿಂದ ಕಲೆ ಹಾಕಿದ ಈ ಹನ್ನೊಂದು ಕಥೆಗಳು ನಾವು ಜವಾಬ್ದಾರಿಯಿಂದ ನಡೆದುಕೊಂಡರೆ ಹೇಗೆ ನಮ್ಮ ಬದುಕು ಸುಧಾರಿಸುತ್ತದೆ ಎಂಬುದನ್ನು ತೋರಿಸಿಕೊಡುತ್ತವೆ.



₹99

www.amarchitrakatha.com
ISBN 978-81-967344-1-1
9 788196 734411